ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 268/2016

.........................................................................

CW 09
PW 09

| | | |
|---|---|---|
| ಹೆಸರು | : | ರಾಮನಾಥ ನಾಯ್ಕ |
| ತಂದೆಯ ಹೆಸರು | : | ಕೋಮಾರ |
| ವಯಸ್ಸು | : | 64 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | : | ಹಳಿಯಾಳ ಪಟ್ಟಣ. |

ದಿನಾಂಕ 13-09-2023 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ಸಾಕ್ಷಿಗೆ ಒಂದು ದಾಖಲೆ ತೋರಿಸಿ ಸಹಿ ಗುರುತಿಸಲು ಸೂಚಿಸಿದ್ದು, ಸಾಕ್ಷಿ ಸದರಿ ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಪಂಚನಾಮೆ ಇದ್ದು ಅದನ್ನು ನಿಪಿ 20 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 20 ಬಿ ಎಂದು ಗುರುತಿಸಲಾಯಿತು.

ಸುಮಾರು 10 ವರ್ಷಗಳ ಹಿಂದೆ ಹಳಿಯಾಳ ಪೊಲೀಸ ಠಾಣೆಯಲ್ಲಿ ನಿಪಿ 20 ಕ್ಕೆ ಸಹಿ ಮಾಡಿರುತ್ತೇನೆ. ದುರ್ಗಾನಗರದ ಪೊಲೀಸ ವಸತಿ ಗೃಹದಲ್ಲಿ ಪೊಲೀಸರು ನನ್ನ ಸಮಕ್ಷಮ ಯಾವುದೇ ಜಪ್ತು ಪಂಚನಾಮೆ ಮಾಡಿಲ್ಲ. ಆ ವಸತಿ ಗೃಹದಲ್ಲಿ ಈಗ ತೋರಿಸುತ್ತಿರುವ ರಚನಾ ಜಿ ನಾಯ್ಕ ಎಂದು ಬರೆದಿರುವ ಒಂದು ಡೈರಿಯನ್ನು ಪರಿಶೀಲಿಸಿ ಅದರಲ್ಲಿ ಎಸ್ ಡ್ಲೂ 3 ಎಂದು ಕೆಂಪು ಅಕ್ಷರದಲ್ಲಿ ನನ್ನ ಸಮಕ್ಷಮ ಬರೆದಿರುವುದನ್ನು ನೋಡಿಲ್ಲ ಹಾಗೂ ಆಪಾದಿತನ ಸಮಕ್ಷಮ ಅದನ್ನು ಜಪ್ತುಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 14-08-2013 ರಂದು ಚಾಸಾ 15 ರವರು ನನ್ನನ್ನು ಹಾಗೂ ಚಾಸಾ 9 ರವರನ್ನು ಪಂಚರಾಗಿ ಕರೆದು ನಿಪಿ 20 ರಲ್ಲಿರುವಂತೆ ಪಂಚನಾಮೆ ಮಾಡಿ ಈಗ ನ್ಯಾಯಾಲಯದ ಮುಂದಿರುವ ರಚನಾ ಜಿ ನಾಯ್ಕು ಎಂಬ ಡೈರಿಯನ್ನು ಅದರಲ್ಲಿ ಎಸ್ ಡ್ಲೂ 3 ಎಂದು ಕೆಂಪು ಅಕ್ಷರದಲ್ಲಿ ಗುರುತು ಹಾಕಿ ಆಪಾದಿತನ ಮಾದರಿ ಕೈ ಬರಹ ದಾಖಲಾತಿಗಾಗಿ ಎಂದು ಜಪ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ನಿಪಿ 20 ರಂತೆ ಪಂಚನಾಮೆ ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :** ಆರೋಪಿ ಪರ ಶ್ರೀ ಎ ಎಫ್ ಕೆ ವಕೀಲರು ಏನು ಇಲ್ಲ ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.